ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಕುಮ್ಕಿ ಜಮೀನನ್ನು ರೈತರಿಗೆ ನೀಡುವ ಕುರಿತು

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) :-

311 (469) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕುಮ್ಕಿ, ಕಾಣೆ ಬಾಣೆ, ಜಮ್ಮಾ, ಸೊಪ್ಪಿನ ಬೆಟ್ಟದಂತಹ ಭೂಮಿಯನ್ನು ಅದರ ಹಕ್ಕನ್ನು (privilege) ಹೊಂದಿರುವ ರೈತರಿಗೆ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಅದರ ಕರಡು ಯೋಜನೆಯು ರಚನೆಯಾಗಿದೆಯೇ; (ಪ್ರತಿಯನ್ನು ಒದಗಿಸುವುದು)

(ಆ) ಇಲ್ಲವಾದಲ್ಲಿ , ರಾಜ್ಯದಲ್ಲಿ ಅತೀ ಹೆಚ್ಚು ಅರಣ್ಯವನ್ನು ಹೊಂದಿರುವ ಕುಮ್ಕಿ, ಕಾಣೆ ಬಾಣೆ, ಜಮ್ಮಾ, ಸೊಪ್ಪಿನ ಬೆಟ್ಟದಂತಹ ಭೂಮಿಯನ್ನು ಅಲ್ಲಿನ ರೈತರ ಹಕ್ಕಿನಂತೆ (privilege) ಕಾಯ್ದುಕೊಂಡು ಹೋಗಲು ಸರ್ಕಾರವು ಯಾವ ಕ್ರಮವನ್ನು ವಹಿಸಿದೆ ; ಇಲ್ಲವಾದಲ್ಲಿ ಇರುವ ಕಾಡು ಕೂಡ ನಾಶವಾಗುವ ಸಾಧ್ಯತೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಭೂಮಿಯನ್ನು ಪರಿವರ್ತಿಸದೆ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸದೇ ಇರುವ ಕಾಡನ್ನು ಉಳಿಸಿಕೊಂಡು ಹೋಗುವ ಷರತ್ತಿನೊಂದಿಗೆ ಸರ್ಕಾರದ ಮಾರ್ಗಸೂಚಿ ದರದ ಅರ್ಧ ಮೌಲ್ಯದಲ್ಲಿ ಆಯಾ ರೈತರಿಗೆ ನೀಡುವ ಯೋಜನೆಯು ಸರ್ಕಾರದ ಮುಂದಿದೆಯೇ ?